† ಶ್ರೀ ಎನ್. ರಾಚಯ್ಯ.—ಈ ವಿಚಾರವನ್ನು ಈಗ ಹಿಂದುಳಿದ ಆಯೋಗದವರು ಪರಿಶೀಲನೆ ಮಾಡುತ್ತಿದ್ದಾರೆ. ಆ ವರದಿ ಬಂದಮೇಲೆ ಇದನ್ನು ಪರಿಶೀಲನೆ ಮಾಡುತ್ತೇವೆ. ಆದರೆ ಈ ಹಿಂದೆ ಇದೇ ರಾಜ್ಯ ಸರ್ಕಾರದವರು 1960ರಲ್ಲಿ ಹಳೇಮೈಸೂರು ವಿಭಾಗದಲ್ಲಿದ್ದ ಲಂಬಾಣಿ ಜನರನ್ನು ಪರಿಶಿಷ್ಟವರ್ಗದವರ ಜೊತೆಗೆ ಸೇರಿಸಿದ್ದುದನ್ನು ತೆಗೆದು ಆ ಜನಾಂಗದವರನ್ನು ಷೆಡ್ಯೂಲ್ಡ್ ಟ್ರೈಬ್‌ಗೆ ಸೇರಿಸಬೇಕೆಂಬುದಾಗಿ ಕೇಂದ್ರಕ್ಕೆ ಶಿಫಾರಸ್ಸನ್ನು ಮಾಡಿತು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಹಾಗೆ 1960ರಲ್ಲೇ ಮಾಡಿದ್ದ ಶಿಫಾರಸ್ಸನ್ನು ಕಾರ್ಯಗತ ಮಾಡತಕ್ಕ ಬಗ್ಗೆ ಇಲ್ಲಿಯವರೆಗೂ ಏಕೆ ಕೇಂದ್ರಕ್ಕೆ ರಾಜ್ಯಸರ್ಕಾರ ಒತ್ತಾಯ ಹಾಕಲಿಲ್ಲ.

ಶ್ರೀ ಎನ್. ರಾಚಯ್ಯ.—ಆ ಕಾರ್ಯವನ್ನು ತಮ್ಮಂಥ ಶಾಸನಕರೂ ಮತ್ತು ಪಾರ್ಲಿಯ ಮೆಂಟಿನ ಸದಸ್ಯರೂ ಮಾಡಬೇಕಾಗಿದೆ. ಅದನ್ನು ತೀರ್ಮಾನಮಾಡತಕ್ಕ ಅಧಿಕಾರ ಕೇಂದ್ರದಲ್ಲಿರ ತಕ್ಕ ಆ ರಾಷ್ಟ್ರಪತಿಗಳೊಬ್ಬರಿಗೇ ಸೇರಿದ್ದು. ರಾಜ್ಯಸರ್ಕಾರವೇನೂ ಮಾಡುವುದಕ್ಕಾಗುವುದಿಲ್ಲ. ಆದರೆ ಇವರಿಗೆ ಈಗಾಗಲೇ ಕೆಲವು ವಿದ್ಯಾ ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆ. ಆದರೆ ನಾನಾಗಲೇ ಹೇಳಿದಂತೆ ಹಿಂದುಳಿದ ವರ್ಗದ ಆಯೋಗದವರ ವರದಿ ಬಂದನಂತರ ಇವರನ್ನು ಯಾವ ವರ್ಗಕ್ಕೆ ಸೇರಿಸಬೇಕೆಂಬ ಬಗ್ಗೆ ಒಂದು ತೀರ್ಮಾನ ತಗೆದುಕೊಳ್ಳುತ್ತೇವೆ. ಅದರಂತೆ ಕೇಂದ್ರಕ್ಕೆ ಶಿಫಾರ್ಸು ಮಾಡುತ್ತೇವೆ.

ಶ್ರೀ ಎ. ಶರಣಪ್ಪ.—ಇನ್ನಾದರೂ ಈ ಕಾರ್ಯವನ್ನು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಖಂಡಿತ ಮಾಡುತ್ತೇವೆ.

Water Supply Scheme in Bhoj Village

39. **Sri J. S. AMMANNAVAR** (Sadalga)—

Will the Minister for Rural Development and Social Welfare be pleased to state :—

(*a*) the year in which the Bhoj (village in Chikodi taluk) drinking water supply scheme has been completed ;

(*b*) the expenditure incurred over the scheme ;

(*c*) whether it has come to the notice of the Government that the scheme has become a total failure due to leakage of pipes and faulty execution of the well work in the river ;

(*d*) whether the Government has received any complaints regarding the spread of epidemics like Jaundice , dysentery and other diseases due to leakage of pipe lines ;

(*e*) if so, the steps Government propose to take ?

Sri N. RACHAIAH (Minister for Rural Development and Social Welfare)—

(*a*) 1968.

(*b*) Rs. 1,85,955.

---

† Indicates that remarks or speeches have not been revised by the member concerned.

(*c*) The scheme is not a total failure, but it requires certain repairs.

(*d*) Yes. But the leakage in the pipes of rising main are not the causes of such epidemics.

(*e*) An improvement scheme for providing additional infiltration well, stoppage of leakages in the rising main and increasing the capacity of pumping machinery is being got up. It is also proposed to provide some more bore wells to meet the shortage of drinking water supply in the village. All medical facilities are also provided to the village to prevent such epidemics.

ಶ್ರೀ ಜೆ. ಎಸ್. ಅಮ್ಮಣ್ಣವರ್.— ಇಲ್ಲಿ ಉತ್ತರದಲ್ಲಿ ಸುಧಾರಣಾಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಇದನ್ನು ತಯಾರಿಸುವುದಕ್ಕೆ ಇನ್ನೂ ಎಷ್ಟು ದಿನಗಳು ಬೇಕು—ಎಷ್ಟು ಕಾಲಬೇಕೆಂಬುದನ್ನು ನಾನು ತಿಳಿಯಬಹುದೇ ?

† ಶ್ರೀ ಎನ್. ರಾಚಯ್ಯ.—ಅಲ್ಲಿ ಕುಡಿಯುವ ನೀರಿನ ಅಗತ್ಯ ಬಹಳವಾಗಿದೆಯೆಂಬುದನ್ನು ಅರಿತೇ ಅಲ್ಲಿ ಈಗಾಗಲೇ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಕೆಲವು ಬೋರ್‌ವೆಲ್‌ಗಳನ್ನು ಮಾಡಿ ನೀರನ್ನೊದಗಿಸುವುದಕ್ಕೆ ಆದೇಶ ಕೊಟ್ಟಿದ್ದೇನೆ.

ಶ್ರೀ ಜೆ. ಎನ್. ಅಮ್ಮಣ್ಣವರ್.—1968ರಲ್ಲಿ ಪೂರ್ಣವಾದ ಈ ಯೋಜನೆ ಮುಗುಹುಟ್ಟಿದ ಕೂಡಲೆ ಆದಕ್ಕೆ ಗ್ರಾಲಗ್ರಹ ಹಿಡಿಯಿತು... ಅಂದಹಾಗೆ ಇದರ ಬಗ್ಗೆ ಇಂಥ ಲೋ ಕ್ವಾಲಿಟಿ ಕೆಲಸ ಮಾಡಿದ ಇಂಜಿನಿಯರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ಮತ್ತು ನಮ್ಮಲ್ಲಿ ಒಳ್ಳೆ ಇಂಜಿನಿಯರುಗಳಿಲ್ಲವೇ ?

ಶ್ರೀ ಎನ್. ರಾಚಯ್ಯ.—ಅದರಲ್ಲಿ ಇಂಜಿನಿಯರವರ ನಿರ್ಲಕ್ಷವೇನೂ ಇರುವುದಿಲ್ಲ. ಆ ಜಾಗ ಬ್ಲಾಕ್‌ಕಾಟನ್ ಸಾಯಿಲ್ ಇರುವುದಾದುದರಿಂದಲೂ ಮತ್ತು ಆ ಕೆಲಸದಲ್ಲಿ ಸಾಕಷ್ಟು ಕಾಲ ಅದನ್ನು ಕ್ಯೂರಿಂಗ್ ಮಾಡದೆ ಇದ್ದ ಕಾರಣ ಆ ತೊಂದರೆಯಾಗಿದೆಯೆಂದು ನನಗೆ ಇಲ್ಲಿ ವರದಿ ಬಂದಿದೆ. ಆ ಬಗ್ಗೆ ದುರಸ್ತಿಮಾಡಲು ಈಗಾಗಲೇ ಸೂಕ್ತಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಜೆ. ಎಸ್. ಅಮ್ಮಣ್ಣನವರ್.—ಕೇವಲ 12 ಮೈಲುಗಳ ಟ್ರಾನ್ಸ್‌ಪೋರ್ಟೇಷನ್ನಿಗೆ 56 ಸಾವಿರ ಕ್ಲೈಂ ಮಾಡಿ ಆಬಗ್ಗೆ ಇಂಜಿನಿಯರ್ ಕಡ್ತಾಯವಾಗಿ ನಿವೃತ್ತಿಹೊಂದಿದ್ದಾರೆ. ಅವಿಚಾರ ನಿಮಗೆ ತಿಳಿದಿರಲಿಕ್ಕಿಲ್ಲ. ಇಂಥ ಕಡಿಮೆ ದರ್ಜೆಯ ಕೆಲಸಮಾಡುವುದು ಸರಿಯೇ ಎಂದು ಕೇಳುತ್ತೇನೆ ?

ಶ್ರೀ ಎನ್. ರಾಚಯ್ಯ.—ತಾವು ಅಂಥ ಅಕ್ರಮಗಳೇನಾದರೂ ಇತ್ತೀಚೆಗೆ ನಡೆದಿರುವುದಿದ್ದರೆ ತಿಳಿಸಿ, ಆ ಬಗ್ಗೆ ನಾನು ಸೂಕ್ತ ವಿಚಾರಣೆ ನಡೆಸುತ್ತೇನೆ.

ಶ್ರೀ ಸಿ. ಬೈರೇಗೌಡ.—ಆ ಕೆಲಸವನ್ನೂ ಪೂರ್ಣವಾಗುವುದಕ್ಕೆ ಮೊದಲೇ ಅಲ್ಲ ಹೀಗಾದರೆ ಅದಕ್ಕೆ ಕಾರಣರು ಯಾರೆಂಬುದನ್ನು ಕಂಡುಹಿಡಿದು ಅವರ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಅಲ್ಲಿ ನೀರು ಕೆಡುವಂತೆ ಮತ್ತು ಸೋರುತ್ತಿರುವ ನೀರನ್ನು ಪ್ಲಗ್ ಮಾಡುವುದಕ್ಕೆ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಈ ಅನ್ಯಾಯಕ್ಕೇನು ಮಾಡಿದ್ದೀರಿ ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರು ಅಪೇಕ್ಷೆಪಟ್ಟರೆ ಇದರ ಬಗ್ಗೆ ಎನ್‌ಕ್ವೈರಿ ಏರ್ಪಾಡು ಮಾಡಿ ಅದರ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸಾಂಕ್ರಾಮಿಕ ರೋಗ ಹರಡದೆ ಇರುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎನ್. ರಾಚಯ್ಯ.—ಸಂಬಂಧಪಟ್ಟ ಇರಾಖೆಯವರನ್ನು ಈ ರೋಗ ಹರಡದಂತೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದ್ದೇವೆ. ಅವರೂ ಸಾಕಷ್ಟು ಕ್ರಮ ತೆಗೆದು ಕೊಂಡಿದ್ದಾರೆ. ಸುತ್ತಮುತ್ತಲಿದ್ದ ಗ್ರಾಮಗಳಲ್ಲಿ ಇದ್ದ ಸಾಂಕ್ರಾಮಿಕ ರೋಗ ಇಲ್ಲಿಗೆ ಹರಡುತ್ತಿದೆಯೆಂದು ವರದಿಯಿದೆ.